# ಜಗಳ ಮಾಡ್ದವ್ರು ಯಾರವ್ರೇ?

■ ಶ್ರೀರಂಜನಿ ಅಡಿಗ

‘ತಪ್ಪೇ ಮಾಡದವ್ರು ಯಾರವ್ರೇ’ ಅಂದಂತೆ ‘ಜಗಳ ಮಾಡದವ್ರು ಯಾರವ್ರೇ?’ ಅಂತ ಧಾರಾಳವಾಗಿ ಕೇಳಬಹುದು. ಪುಟ್ಟ ಮಕ್ಕಳಿಂದ ಹಿಡಿದು ಬುದ್ಧಿನರೆತ ಬುದ್ಧಿಜೀವಿಗಳೂ ಜಗಳವಾಡಲು ಹಿಂದುಮುಂದು ನೋಡುವುದಿಲ್ಲ. ‘ಮಾತು ಬಲ್ಲವನಿಗೆ ಜಗಳವಿಲ್ಲ’ ಎಂದು ಗಾದೆಯೇನೋ ಇದೆ, ಆದರೆ ಮಾತು ಬಲ್ಲವರು ಮಾತ್ರ ಜಗಳವಾಡುವುದಲ್ಲವೇ?

ಶಾಲೆಗೆ ಹೋಗುವ ಮಕ್ಕಳಿಗೂ ಜಗಳಕ್ಕೂ ಬಿಡದ ನಂಟು. ದಿವಸಕ್ಕೊಮ್ಮೆಯಾದರೂ ಜಗಳ ಆಡದಿದ್ದರೆ ಶಾಲೆಗೆ ಹೋಗಿದ್ದೇ ದಂಡವೇನೋ ಎಂಬಂತೆ ಜಗಳವಾಡಬಲ್ಲರು. ಆ ಜಗಳಗಳ ಸ್ಯಾಂಪಲ್ ನೋಡಿ! ‘ಟೀಚರ್, ಅವನು/ಳು ನನ್ನನ್ನೇ ನೋಡುತ್ತಿದ್ದಾನೆ/ಳೆ, ನಗ್ತಾ ಇದ್ದಾರೆ, ಚಿವುಟಿದ, ರಬ್ಬರ್ ತೆಗೆದುಕೊಂಡ’ ಹೀಗೆ ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಹಾಗೆ ಮಕ್ಕಳ ಜಗಳಕ್ಕೆ ಬೇರೆ ಬೇರೆ ಕಾರಣಗಳೂ ಇರುತ್ತವೆ. ಇನ್ನೊಬ್ಬರ ಕೈಲಿರುವ ಆಟಿಕೆಯೇ ಬೇಕು; ಇನ್ನೊಬ್ಬರೊಂದಿಗೆ ಹಂಚಿಕೊಂಡು ಆಟವಾಡಲು ಒಪ್ಪದೇ ಇರುವುದು; ಆಟದಲ್ಲಿ ಮೋಸ ಮಾಡಿದ; ಬ್ಯಾಟಿಂಗ್ ಕೊಡಲಿಲ್ಲ, ಹೀಗೆ.

ಮುಖ್ಯ ವಿಷಯ ಗೊತ್ತಿರಬೇಕಾದದ್ದು ಈ ಜಗಳದಲ್ಲಿ ಪೋಷಕರು ಮಾತ್ರ ಮಧ್ಯೆ ಪ್ರವೇಶಿಸಲೇಬಾರದು. ಒಂದೊಮ್ಮೆ ಪ್ರವೇಶಿಸಿದರೆ ತಮ್ಮ ಮಗು ಮಾಡಿದ್ದೇ ಸರಿ, ನಿಮ್ಮ ಮಗು ಮಾಡಿದ್ದು ತಪ್ಪು ಎಂದು ಜಗಳ ಮನೆಯವರಿಗೆ ಶಿಫ್ಟ್ ಆಗಿಬಿಡುವುದು. ವಿಚಿತ್ರವೆಂದರೆ ಕೆಲನಿಮಿಷಗಳಲ್ಲಿ ಮಕ್ಕಳು ತಾವು ಜಗಳವಾಡಿದ್ದೇ ಸುಳ್ಳು ಎಂಬಂತೆ ಸಂಧಾನವಾಗಿ ಆಟ ಆರಂಭಿಸಿಬಿಟ್ಟಿರುತ್ತಾರೆ. ಅದಕ್ಕೆ ಮಕ್ಕಳ ಜಗಳಕ್ಕೆ ಮೂಗು ತೂರಿಸುವುದು ಭಾರೀ ಡೇಂಜರು. ಮಕ್ಕಳ ಮಟ್ಟಿಗೆ ಜಗಳವಾಡುವುದು ಎಂದರೆ ಜಗಳ + ಆಡುವುದು ಎರಡೂ ಅರ್ಥಗರ್ಭಿತವಾಗುತ್ತದೆ. ಅದಕ್ಕೆ ‘ಇಬ್ಬರ ಜಗಳ ಮೂರನೆಯವರಿಗೆ ಲಾಭ’ ಇಲ್ಲಂತೂ ಅಲ್ಲವೇ ಅಲ್ಲ.

‘ನೂರು ಜನಿವಾರ ಒಟ್ಟಿಗಿರಬಹುದು, ಆದರೆ ಮೂರು ಜಡೆ ಒಟ್ಟಿಗಿರುವುದಿಲ್ಲ’ ಎಂಬ ಗಾದೆಮಾತಿನಂತೆ ಹೆಂಗಸರು ಯಾವಾಗ ಯಾವ ಕಾರಣಕ್ಕೆ ಜಗಳ ಆರಂಭಿಸುತ್ತಾರೆ ಅನ್ನೋದೇ ತಿಳಿಯದು. ಅವರ ಜಗಳವನ್ನು ಕ್ಯಾಟ್‌ಫೈಟ್ ಅಂತಾರಂತೆ. ಹಾಗೆ ಏಕೆ ಹೇಳುತ್ತಾರೆ ಎಂದು ನಂಗೂ ಗೊತ್ತಿಲ್ಲ. ಆದರೆ ನಮ್ಮೂರಲ್ಲಿ ಹೀಗೆ ಜಗಳ ಮಾಡೋ ಹೆಂಗಸರನ್ನು ಜಗಳಗಂಟಿಯರು ಎನ್ನುತ್ತಾರೆ ಎಂದು ಗೊತ್ತು. ಇವರ ಜಗಳದಲ್ಲಿ ಯಾರು ಸರಿ ಯಾರು ತಪ್ಪು ಎಂಬ ಪ್ರಶ್ನೆ ಮೂಡೋದೇ ಇಲ್ಲ, ಯಾರ ಸ್ವರ ಗಟ್ಟಿ, ಯಾರ ನಾಲಗೆ ಹರಿತ ಅನ್ನೋದರ ಮೇಲೆ ನೀರು ಹಿಡಿಯಲು, ಸೀಟು ಹಿಡಿಯಲು, ರೇಷನ್‌ನಲ್ಲಿ ನಿಂತವರಿಗೆ ಗೆಲುವಿನ ಪಟ್ಟ. ಕೆಲವೊಮ್ಮೆ ಕುಸ್ತಿಪಟುಗಳಂತೆ, ಸುಮೋಗಳಂತೆ ತೊಡೆ ತಟ್ಟಿ ಸೀರೆ ನೆರಿಗೆ ಮೇಲೆ ಸಿಕ್ಕಿಸಿ ಅಥವಾ ವೀರಗಚ್ಚೆ ಹಾಕಿ ಜಡೆ ಜಗಳ ನಡೆಯುವುದಿದೆ.

ನನಗನ್ನಿಸುವಂತೆ ಗಂಡಸರ ಜಗಳ ಹೀಗೆ ವರ್ಣಮಯವಾಗಿರುವುದಿಲ್ಲ. ಏಕೆಂದರೆ ಸ್ವಂತ ವಿಷಯಕ್ಕೆ ಅವರೆಂದೂ ಜಗಳವಾಡುವುದಿಲ್ಲ. ಅವರ ಜಗಳಕ್ಕೆ ಕಾರಣ ಲೋಕದ ತಲೆಬಿಸಿಗಳು; ಅಂತಾರಾಷ್ಟ್ರೀಯ ಸಮಸ್ಯೆಗಳು. ರಾಜಕೀಯ, ಕ್ರಿಕೆಟ್, ಅಭಿಮಾನಿ ಸಂಘಗಳು, ಪಾರ್ಟಿ ಕ್ಯಾಂಡಿಡೇಟುಗಳ ವಿಷಯಗಳು. ಹೀಗಾಗಿ ಅವರ ಜಗಳದ ವಿಷಯ ವ್ಯಾಪ್ತಿ ದೊಡ್ಡದು. ತಮಗೆ ಲಾಭವಾಗುತ್ತದೋ ಇಲ್ಲವೋ ಎಂಬ ಚಿಂತೆ ಬಿಟ್ಟು ಸಂಬಂಧ ಪಡದವರ ಬಗ್ಗೆ ವಹಿಸಿಕೊಂಡು ಜಗಳವಾಡಬಲ್ಲ ಉದಾರಿಗಳು ಗಂಡಸರು.

ಜಗಳ ಎಂದ ಮೇಲೆ ಗಂಡ ಹೆಂಡತಿಯರ ಬಗ್ಗೆ ಹೇಳದಿದ್ದರೆ ಆದೀತೇ? ಏಕೆಂದರೆ ಜಗಳ ಮಾಡದ ಗಂಡ ಹೆಂಡತಿಯರೇ ಇರಲಾರರು. ಅವರ ಜಗಳವೂ ಬಲು ವಿಚಿತ್ರದ್ದು. ಕಾಫಿ ತಂದುಕೊಟ್ಟಿಲ್ಲ, ಉಪ್ಪು ಕಮ್ಮಿ ಆಯಿತು ಎಂದು ಗಂಡನೂ, ಹೊಸ ಸೀರೆ ತಂದಿಲ್ಲ, ಹುಟ್ಟಿದ ಹಬ್ಬ ಮರೆತುಬಿಟ್ಟಿದ್ದಾರೆ ಎಂದು ಹೆಂಡತಿಯೂ ಜಗಳಕ್ಕೆ ಓಂಕಾರ ಹಾಕಬಲ್ಲರು, ವೈಕುಂಠದಲ್ಲಿ ಲಕ್ಷ್ಮಿದೇವಿ ವಿಷ್ಣು ಜೊತೆ ಜಗಳವಾಡಿ ಭೂಲೋಕಕ್ಕೆ ಬಂದಿದ್ದಳಂತೆ. ಅಂಥದರಲ್ಲಿ ಹುಲುಮಾನವರದ್ದು ಏನು ವಿಶೇಷ ಅಲ್ಲವೇ? ಹೆಂಡತಿ ಅಡುಗೆ ಮನೆಯಲ್ಲಿ ಪಾತ್ರೆಗಳನ್ನು ಕುಕ್ಕಿ ಕುಕ್ಕಿ ತೊಳೆದಳೋ ಅಥವಾ ನೆಲಕ್ಕೆ ಕುಕ್ಕಿದಳೋ ಇಲ್ಲವೇ ಬಟ್ಟೆ ಪ್ಯಾಕ್ ಮಾಡಿಕೊಂಡು

